# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 17/ 2016

**ಚಾಸಾ ಃ–** 01 / **ಪ್ರಾಸಾ ಃ–** 08

| | |
|---|---|
| ಹೆಸರು | ಹರೀಶ್ ನಾಯಕ್ |
| ತಂದೆ ಹೆಸರು | ರಾಮಾನಾಯಕ್ |
| ವಯಸ್ಸು | 48 |
| ಉದ್ಯೋಗ | ವಿಶೇಷ ಭೂಸ್ವಾಧೀನ ಅಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ |
| ವಿಳಾಸ | ಬೆಂಗಳೂರು |

**ದಿನಾಂಕಃ 14.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ– **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ–

ದಿನಾಂಕ 10.02.2013 ರಿಂದ 25.09.2013 ರವರೆಗೆ ಮಾಗಡಿ ತಾಲ್ಲೂಕಿನ ತಹಸಿಲ್ದಾರ್ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ 24.04.2013 ರಂದು ಒಂದು ದೂರನ್ನು ಕುದೂರು ಪೋಲಿಸ್ ಠಾಣೆಯಲ್ಲಿ ನೀಡಿರುತ್ತೇನೆ. ಸದರಿ ದೂರಿನ ಸಾರಾಂಶವೇನೆಂದರೆ ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ಗಂಗೋನಹಳ್ಳಿ ಗ್ರಾಮದಲ್ಲಿ ಸುಮಾರು 26 ಜನರನ್ನು ಅನಧಿಕೃತವಾಗಿ ಮತದಾರರ ಪಟ್ಟಿಯಲ್ಲಿ ಸೇರಿಸಿರುತ್ತಾರೆ ಎಂದು ದೂರು ಬಂದಿದ್ದು ಹಾಗೂ ಅಲ್ಲಿನ ಸಾರ್ವಜನಿಕರು ಸಹ ನನಗೆ ಆಕ್ಷೇಪಣೆಯನ್ನು ಕೊಟ್ಟಿದ್ದರು. ನಾನು ಕಂದಾಯ ಇನ್ಸ್ಪೆಕ್ಟರ್ ಮತ್ತು ಸ್ಥಳೀಯ ಗ್ರಾಮಲೆಕ್ಕಾಧಿಕಾರಿಗಳಾದ ರಂಗಸ್ವಾಮಿ, ರವರಿಗೆ ಸದರಿ ವಿಷಯದ ಬಗ್ಗೆ

ವಿಚಾರಣೆ ಮಾಡಿದಾಗ ಸದರಿ ಗ್ರಾಮಲೆಕ್ಕಾಧಿಕಾರಿಯು ನನಗೆ ತಿಳಿಸಿದ್ದೇನೆಂದರೆ ನಾರಾಯಣಮೂರ್ತಿ, ಚೌಡನಪಾಳ್ಯ , ನ್ಯಾಯಬೆಲೆ ಅಂಗಡಿಯ ಮಾಲೀಕರು 50 ಫಾರಂ 6 ಅನ್ನು ತಂದು ಸದರಿಯವರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿ ಎಂದು ಹೇಳಿ ಕೊಟ್ಟಿದ್ದರು ಎಂದು ತಿಳಿಸಿದರು. ಆಗ ಸದರಿ ಗ್ರಾಮಲೆಕ್ಕಾಧಿಕಾರಿಯವರು ಇವರು ಊರಿನಲ್ಲಿ ಇರುವುದಿಲ್ಲ ಹಾಗಾಗಿ ಸದರಿಯವರನ್ನು ಮತದಾರರ ಪಟ್ಟಿಗೆ ಸೇರಿಸಲು ಬರುವುದಿಲ್ಲ ಎಂದು ಹೇಳಿದಾಗ ಸದರಿ ನಾರಾಣಯಮೂರ್ತಿ ರವರು ಗ್ರಾಮಲೆಕ್ಕಾಧಿಕಾರಿಯವರಿಗೆ ನಿನ್ನ ಕೈಯನ್ನು ಕಡಿಯುತ್ತೇನೆ ಎಂದು ಹೆದರಿಕೆ ಹಾಕಿದ್ದನು ಎಂದು ತಿಳಿಸಿದರು. ಹಾಗಾಗಿ ಸದರಿ ಗಾಮಲೆಕ್ಕಾಧಿಕಾರಿಯವರು ಬಿ ಎಲ್ ಒ ರವರ ಮುಖಾಂತರ ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವುದಿಲ್ಲ. ನಂತರ ನನಗೆ ತಿಳಿದಿದ್ದೇನೆಂದರೆ ಸದರಿ ನರಾಣಯಮೂರ್ತಿಯವರು ಸೈಬರ್ ಕೆಫೆಯಿಂದ ನಮ್ಮ ಲಾಗಿನ್ ಮತ್ತು ಪಾಸ್ ವರ್ಡ್ ಅನ್ನು ಬಳಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಅದರಂತೆ ನಾನು ತನಿಖೆ ಮಾಡಲು ಕುದೂರು ಪೋಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ. ಸದರಿ ಕೃತ್ಯವು ದಿನಾಂಕ 07.04.2013 ಮತ್ತು 09.04.2013 ರಂದು ನಡೆದಿರುವುದು ಕಂಡುಬಂದಿರುತ್ತದೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ–8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಶ್ರೀ. ಆರ್.ಎಸ್.** ವಕೀಲರಿಂದ 1ನೇ **ಆರೋಪಿ** ಪರವಾಗಿ ಃ–

ಯಾವ ಸಾರ್ವಜನಿಕರು ಅನಧಿಕೃತವಾಗಿ ಮತದಾರರ ಪಟ್ಟಿಗೆ ಸೇರಿಸುತ್ತಿದ್ದಾರೆ ಎಂದು ದೂರನ್ನು ಕೊಟ್ಟಿರುತ್ತಾರೆ ಎಂದು ಹೇಳಲು ಬರುತ್ತದೆಯೆ

ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ 50 ಮತದಾರರು ಯಾರು ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ರಂಗಸ್ವಾಮಿರವರು ಗ್ರಾಮಲೆಕ್ಕಾಧಿಕಾರಿಯಾಗಿ ಸದರಿ ದಿನದಂದು ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ಅವರ ಹಾಜರಾತಿ ಪುಸ್ತಕವನ್ನು ಪೋಲಿಸರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 07.04.2013 ಹಾಗೂ 09.04.2013 ರಂದು ಘಟನೆ ನಡೆದಿರುತ್ತದೆ ಎಂದು ಹೇಳಿದ್ದು ಸದರಿ ದಿನದಂದು ನೀವು ದೂರನ್ನು ದಾಖಲಿಸಿರುತ್ತೀರಾ ಎಂದರೆ ಸಾಕ್ಷಿ ಆಗ ನಮಗೆ ಕಂಡುಬಂದಿದ್ದಿರಲಿಲ್ಲ, ದಾಖಲೆಗಳನ್ನು ಪರಿಶೀಲಿಸಿದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಗಮನಕ್ಕೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ದಿನಾಂಕ 24.04.2013 ಎಂದು ನುಡಿಯುತ್ತಾರೆ. ದೂರನ್ನು ನೀವೆ ಖುದ್ದಾಗಿ ಕೊಟ್ಟಿರುತ್ತೀರೋ ಅಥವಾ ನಿಮ್ಮ ಸಿಬ್ಬಂದಿಯೊಂದಿಗೆ ಕಳುಹಿಸಿರುತ್ತೀರೋ ಅಥವಾ ಅಂಚೆ ಮೂಲಕ ಕಳುಹಿಸಿರುತ್ತೀರೋ ಎಂದರೆ ಸಾಕ್ಷಿ ನನ್ನ ಸಿಬ್ಬಂದಿಯೊಂದಿಗೆ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಎಂದರೆ ಸಾಕ್ಷಿ ಈಗ ಸಮಯ ನನಗೆ ಜ್ಞಾಪಕ ಇರುವುದಿಲ್ಲ ಎಂದು ನುಡಿಯುತ್ತಾರೆ. ಮತದಾರರ ಪಟ್ಟಿಗೆ ಮತದಾರರನ್ನು ಸೇರಿಸಬೇಕಾದರೆ ನಿಮ್ಮ ಅಧಿಕಾರಿಗಳೆ ಸೇರಿಸಬೇಕಾಗುತ್ತದೆ ಸಾಮಾನ್ಯ ಜನರು ಯಾರೂ ಸೇರಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಲಾಗಿನ್ ಎಂದರೆ ಸಾಕ್ಷಿಯು ಯೂಸರ್ ಐಡಿ ಮತ್ತು ಪಾಸ್ ವರ್ಡ್ ಎಂದು ನುಡಿಯುತ್ತಾರೆ. ಸದರಿ ಲಾಗಿನ್ ಐಡಿ ಮತ್ತು ಪಾಸ್ ವರ್ಡ್ ನಿಮ್ಮ ಕಛೇರಿಯ ಸೀಕ್ರೆಟ್ ಮತ್ತು ಕಾನ್ಫಿಡೆನ್ಷಿಯಲ್ ಐ ಡಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಂಬಂಧಪಟ್ಟ ಕೇಸ್ ವರ್ಕರ್ ಸದರಿ ಲಾಗಿನ್ ಐಡಿ ಓಪನ್ ಮಾಡಬೇಕು ಹಾಗೂ ಅವರೇ ಮತದಾರರ ಪಟ್ಟಿಗೆ ಸೇರಿಸಬೇಕು ಬೇರೆ ಯಾರೂ ಸಹ ಸೇರಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದೂರಿನಲ್ಲಿ ನಿಮ್ಮ ಸಿಬ್ಬಂದಿ ಬಗ್ಗೆ ಹೇಳಿರುತ್ತೀರಾ ಎಂದರೆ ಸಾಕ್ಷಿ

ನಮ್ಮ ಸಿಬ್ಬಂದಿ ಯಾರೂ ಇರುವುದಿಲ್ಲ , ಮಾರುತಿ ಸೈಬರ್ ಕೆಫೆಯವರು ಕದ್ದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಾರುತಿ ಸೈಬರ್ ನವರು ಈ ರೀತಿ ಮಾಡಿರುತ್ತಾರೆ ಎಂದು ನಿಮಗೆ ದೂರು ನೀಡುವಾಗ ಗೊತ್ತಿತ್ತೆ ಎಂದರೆ ಸಾಕ್ಷಿ ಗೊತ್ತಿತ್ತು ಎಂದು ನುಡಿಯುತ್ತಾರೆ. ಸೈಬರ್ ನಡೆಸಲು ಅದರ ಬಗ್ಗೆ ಜ್ಞಾನ ಇದ್ದವರು ಮಾತ್ರ ನಡೆಸಲು ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.ಮಾರುತಿ ಸೈಬರ್ ನ ಮಾಲೀಕರು ಯಾರು ಎಂದು ನಿಮಗೆ ತಿಳಿಯಿತೆ ಎಂದರೆ ಸಾಕ್ಷಿ ತುಂಬಾ ವರ್ಷ ಆಗಿರುವುದರಿಂದ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ದೂರನ್ನು ನೀಡಿದ ನಂತರ ಪೋಲಿಸರು ನಿಮ್ಮನ್ನು ಸದರಿ ಮಾರುತಿ ಸೈಬರ್ ಗೆ ಕರೆದುಕೊಂಡು ಹೋಗಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ದೂರಿನಲ್ಲಿ ತಿಳಿಸಿರುವಂತೆ ರಂಗಸ್ವಾಮಿ ರವರು ನಿಮಗೆ ಯಾವುದೇ ಪತ್ರ ಮತ್ತು ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರಗಳನ್ನು ದೂರಿನ ಜೊತೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ದೂರಿನ ಲಗತ್ತಾಗಿ ಪತ್ರಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 4 ದಾಖಲೆಗಳನ್ನು ದೂರಿನ ಜೊತೆ ಕೊಡುತ್ತಿದ್ದೇನೆ ಎಂದು ದೂರಿನಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ನಮೂದಿಸಿರುವ 26 ಜನ ಹೊಸಮತದಾರರ ಹೆಸರು ಮತ್ತು ವಿಳಾಸ ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಈಗ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ಇತರೆ ರಾಜಕೀಯ ಪಕ್ಷಗಳು ಆಕೇಪಣೆ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಸದರಿ ಆಕ್ಷೇಪಣ ಪತ್ರಗಳನ್ನು ದೂರಿನ ಜೊತೆಯಲ್ಲಿ ಅಥವಾ ಪೋಲಿಸರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾರಾಯಣಮೂರ್ತಿ ಮಾಲೀಕರು ನ್ಯಾಯಬೆಲೆ ಅಂಗಡಿ ಮತ್ತು ಇತರೆ ಪಕ್ಷದ

ಕಾರ್ಯಕರ್ತರಾಗಿದ್ದು ಎಂದು ಹೇಳಿದ್ದು ಯಾವ ವಪಕ್ಷದ ಕಾರ್ಯಕರ್ತರು ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಕ್ರಮ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದ್ದ ಬಗ್ಗೆ ನಿಮ್ಮ ಇಲಾಖೆಯ ನೌಕರರನ್ನು ವಿಚಾರಣೆ ಮಾಡಿರುತ್ತೀರಾ ಹಾಗೂ ದೂರಿನಲ್ಲಿ ಸೇರಿಸಿರುತ್ತೀರಾ ಎಂದರೆ ಸಾಕ್ಷಿ ದೂರಿನಲ್ಲಿ ಹೇಳಿರುವುದಿಲ್ಲ ಆದರೆ ವಿಚಾರಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 07.04.2013 ರಂದು ಮತದಾರರ ಪಟ್ಟಿಯಲ್ಲಿ ಊರಿನಲ್ಲಿ ವಾಸ ಇಲ್ಲದ ಸುಮಾರು 50 ಕೂಕ ಹೆಚ್ಚು ಅರ್ಜಿಗಳನ್ನು ಕೈಯಲ್ಲಿ ಹಿಡಿದುಕೊಂಡು ಸೇರ್ಪಡೆ ಮಾಡದಿದ್ದಲ್ಲಿ ಸದರಿ ಮೃತದ ಗ್ರಾಮಲೆಕ್ಕಾಧಿಕಾರಿಯವರ ಕೈ ಕತ್ತರಿಸುವುದಾಗಿ ಬೈಯ್ದಿದ್ದು ಎಂದು ಹೇಳಿದ್ದು ನಿಮಗೆ ಯಾರು ಹಾಗೂ ಯಾವಾಗ ಹೇಳಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ 24.04.2013 ರ ಂದು ಗಾಮಲೆಕ್ಕಾಧಿಕಾರಿಯಾದ ರಂಗಸ್ವಾಮಿ ರವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ಎಲ್ಲಿ ಮತ್ತು ಯಾವಾಗ ಹೇಳಿರುತ್ತಾರೆ ಹಾಗೂ ಯಾರು ಯಾರು ಇದ್ದರು ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿ ಗಂಗೋನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ಇದ್ದಾಗ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ದೂರಿನಲ್ಲಿ ಸೇರಿಸಲು ತೊಂದರೆ ಇತ್ತ ಎಂದರೆ ಸಾಕ್ಷಿ ಹೇಳಿರುವುದಿಲ್ಲ ಆ ಸಮಯದಲ್ಲಿ ಯಾವ ವಿಷಯ ಬೇಕೋ ಅದನ್ನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಕಛೇರಿಯಲ್ಲಿ ಇರುವ ಲಾಗಿನ್ ಮತ್ತು ಪಾಸ್ ವರ್ಡ್ ಹಾಗೂ ಎಲ್ಲಾ ಕಂಪ್ಯೂಟರ್ ಉಪಕರಣಗಳು ನಿಮ್ಮ ಸುಪರ್ದಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-8 ರ ದೂರನ್ನು ತೋರಿಸಲಾಗಿ ಸದರಿ ದೂರನ್ನು ಹೊರತು ಪಡಿಸಿ ಬೇರೆ ಯಾವುದಾದರೂ ದೂರನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಯಾವುದೇ ದಾಖಲೆಗಳನ್ನು ಲಗತ್ತು ಮಾಡಿರುವುದರ ಬಗ್ಗೆ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ

ಆರೋಪಿಗಳಿಗೆ ನೀಡಿದ ದಾಖಲೆಗಳಲ್ಲಿನ ದೂರನ್ನು ತೋರಿಸಲಾಗಿ ಸದರಿ ದೂರಿನಲ್ಲಿ ಇರುವ ಸಹಿ ನಿಮ್ಮದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು **ನಿಡಿ-1 ಎಂದು ಗುರುತಿಸಲಾಯಿತು.**

ನಿಮ್ಮ ಕಛೇರಿಯ ಸಿಬ್ಬಂದಿಗಳು ಏನು ತಪ್ಪು ಮಾಡಿದ್ದರೂ ಅದನ್ನು ಮುಚ್ಚಿಹಾಕಲು ಹಾಗೂ ರಾಜಕೀಯ ಒತ್ತಡಕ್ಕೆ ಮಣಿದು ಅಮಾಯಕರ ವಿರುದ್ದ ಒಂದು ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳ ಹೆಸರು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ ಹಾಗೂ ಆರೋಪಿಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀಸವಾಲುಃಃ** 2 ಮತ್ತು 3 ನೇ ಆರೋಪಿ ಪರ ವಕೀಲರಿಂದಃ 2 ಮತ್ತು 3 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಲು ಕೇಳಿಕೊಂಡಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**